# ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮಾದೃಷ್ಟಿ

ಪಿಎಚ್ ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ

ಮೈಸೂರು
1981

## ಮಾರ್ಗದರ್ಶಕರ ಪ್ರಮಾಣ ಪತ್ರ

'ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮಾಸೃಷ್ಟಿ' ಎಂಬ ಈ ಪ್ರೌಢ ಪ್ರಬಂಧವನ್ನು ಶ್ರೀ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಮಾಡಿದ್ದಾರೆ. ಈ ಪ್ರಬಂಧವನ್ನು ಈ ಹಿಂದೆ ಯಾವುದೇ ಡಿಪ್ಲೊಮಾ ಅಥವಾ ಪದವಿಯ ಸಲುವಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಅವರು ಸಲ್ಲಿಸಿರುವುದಿಲ್ಲ.

10/8/87

ಮೈಸೂರು

ಡಾ. ಹಾ. ಮಾ. ನಾಯಕ
ನಿರ್ದೇಶಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು.

# ಪ್ರಮಾಣ ಪತ್ರ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿರುವ ಡಾ. ಹಾ.ಮಾ.ನಾಯಕರ ಮಾರ್ಗದರ್ಶನದಲ್ಲಿ ನಾನು 'ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮಾಸೃಷ್ಟಿ' ಎಂಬ ಈ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ. ಈ ಪ್ರಬಂಧವನ್ನು ಈ ಹಿಂದೆ ಯಾವುದೇ ಡಿಪ್ಲೊಮಾ ಅಥವಾ ಪದವಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲ.

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಮೈಸೂರು
೧೦-೮-೧೯೮೧

ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ
ಕನ್ನಡ ಸಹ ಪ್ರಾಧ್ಯಾಪಕ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು — 560 056

## ಮೊದಲ ಮಾತು

ಕನ್ನಡ ಕಾವ್ಯಗಳನ್ನು ವಿಮರ್ಶಿಸುವಾಗ ಅದರಲ್ಲಿಯೂ ನವ್ಯಕೃತಿಗಳ ವಿಮರ್ಶೆ ಮಾಡುವಾಗ ಅಲ್ಲಿ ಬಳಕೆಯಾಗಿರುವ ಪ್ರತಿಮೆಗಳ ಬಗ್ಗೆ ವಿಮರ್ಶಕರು ಅಲ್ಲಲ್ಲಿ ಕೆಲವು ಮಾತು ಹೇಳಿರುವುದುಂಟು; ಕಾವ್ಯದಲ್ಲಿ ಪ್ರತಿಮೆಯ ಪಾತ್ರ ಎಷ್ಟು ಮಹತ್ವದ್ದು ಎಂದು ಸೂಚಿಸಿರುವುದುಂಟು. ಆದರೆ ಕಾವ್ಯಪ್ರತಿಮೆಯ ಸ್ವರೂಪ ಮತ್ತು ಕಾರ್ಯವಿಧಾನಗಳನ್ನು ಕುರಿತು ವಿಸ್ತಾರವಾಗಿ ಪ್ರತಿಪಾದಿಸಿರುವ ಗ್ರಂಥಗಳು ಕನ್ನಡದಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಕುವೆಂಪು ಅವರ ಎರಡು ಮೂರು ಲೇಖನಗಳು, ಎಸ್.ಎಲ್ ಭೈರಪ್ಪನವರ ಸಾಹಿತ್ಯ ಮತ್ತು ಪ್ರತೀಕ ಎಂಬ ಹೊತ್ತಗೆ, ಗೋಪಾಲಕೃಷ್ಣ ಅಡಿಗರ ಒಂದು ಲೇಖನ — ಇಷ್ಟು ಬಿಟ್ಟರೆ ಪ್ರತಿಮೆಯ ಬಗ್ಗೆ ಚರ್ಚಿಸುವ ಪ್ರತ್ಯೇಕ ಬರೆಹ ಸಿಗುವುದೇ ಇಲ್ಲ.

ಈ ದಿಕ್ಕಿನಲ್ಲಿ ಕೆಲಸಮಾಡಲು ಅವಕಾಶವಿದೆಯೆಂದೇ 'ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮಾಸೃಷ್ಟಿ' ಎಂಬ ವಿಷಯವನ್ನು ಅಭ್ಯಾಸಕ್ಕಾಗಿ ನಾನು ಆಯ್ಕೆ ಮಾಡಿಕೊಂಡೆ. ಕಾವ್ಯಪ್ರತಿಮೆಯ ಸ್ವರೂಪವನ್ನೂ ಅದರ ಕಾರ್ಯವಿಧಾನವನ್ನೂ ಆಧುನಿಕ ಕನ್ನಡ ಕಾವ್ಯದ ನಿದರ್ಶನಗಳ ಮೂಲಕ ವಿವರಿಸುವ ಯತ್ನವನ್ನು ಈ ಪ್ರಬಂಧದಲ್ಲಿ ಮಾಡಿದ್ದೇನೆ. ಈ ಸಂಬಂಧವಾಗಿ ನಾನು ನಡೆಸಿದ ವ್ಯಾಸಂಗದ ಉದ್ದಕ್ಕೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ.ಹಾ.ಮಾ.ನಾಯಕರು ನನಗೆ ಮಾರ್ಗದರ್ಶನ ಮಾಡಿದ್ದಾರೆ. ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟು, ಅಭ್ಯಾಸಯೋಗ್ಯವಾದ ಗ್ರಂಥಗಳನ್ನು ಸೂಚಿಸಿದ್ದಲ್ಲದೆ ನನ್ನ ವ್ಯಾಸಂಗಕ್ಕೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಅವರು ನನ್ನ ಬರೆಹವನ್ನು ಆಮೂಲಾಗ್ರವಾಗಿ ನೋಡಿ ಒಪ್ಪಿರುವುದರಿಂದ ಇದರ ಬೆಲೆ ಹೆಚ್ಚಿದೆಯೆಂದು ನಾನು ತಿಳಿದಿದ್ದೇನೆ. ನನ್ನ ಕೆಲವು ಅಭಿಪ್ರಾಯಗಳು ಒಪ್ಪಿಗೆಯಾಗದಿದ್ದಾಗ ಅವರು ಅದನ್ನು ಸೂಚಿಸಿದ್ದಾರೆ ಮಾತ್ರವಲ್ಲ, 'ಕಡೆಯಲ್ಲಿ ನಿಮಗೆ ಒಪ್ಪಿಗೆಯಾದದ್ದನ್ನೇ ಉಳಿಸಿಕೊಳ್ಳಬೇಕು' ಎಂದು ಸಲಹೆಮಾಡಿದ್ದಾರೆ. ಅವರ ವಿಶ್ವಾಸ ಔದಾರ್ಯಗಳಿಗೆ ನಾನು ಸದಾ ಕೃತಜ್ಞ.

ಬೆಂಗಳೂರು ವಿಶ್ವವಿದ್ಯಾನಿಲಯವು ನನಗೆ ಎರಡು ವರ್ಷಗಳ ಕಾಲ (1979 – 81) ರಜೆ ನೀಡಿ ಈ ಪ್ರಬಂಧವನ್ನು ಬರೆಯಲು ಅವಕಾಶಮಾಡಿ ಕೊಟ್ಟಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೂ ನಾನು ಕೃತಜ್ಞನಾಗಿದ್ದೇನೆ.

ನಾನು ಮೈಸೂರಿನಲ್ಲಿದ್ದ ದಿನಗಳಲ್ಲಿ ಗೆಳೆಯರಾದ ಶ್ರೀ ಆರ್ ಎಲ್ ಅನಂತರಾಮಯ್ಯ ನನ್ನ ಸೌಕರ್ಯವನ್ನು ನೋಡಿಕೊಂಡಿದ್ದಾರೆ. ಅವರ ಶ್ರೀಮತಿ ಎ ಅನುರಾಧಾ ಈ ಬರವಣಿಗೆಯನ್ನು ತಪ್ಪಿಲ್ಲದಂತೆ ಅಚ್ಚುಕಟ್ಟಾಗಿ ಟೈಪು ಮಾಡಿಕೊಟ್ಟಿದ್ದಾರೆ. ಈ ದಂಪತಿಗಳಿಬ್ಬರಿಗೂ ನನ್ನ ವಂದನೆಗಳು.

## ಮುಖ್ಯಾಂಶ ಸೂಚಿ

### ಅಧ್ಯಾಯ 1   ಪ್ರತಿಮಾ ಸ್ವರೂಪ

ಪೀಠಿಕೆ. ಪ್ರತಿಮಾ ತತ್ವದ ವ್ಯಾಪಕತೆ. ಪ್ರತಿಮಾ ಕಲ್ಪನೆಯನ್ನು ಕುರಿತ ಬೇರೆ ಬೇರೆ ಹೇಳಿಕೆಗಳು. ಅರಿಸ್ಟಾಟಲ್, ಡ್ರೈಡನ್, ಕೋಲರಿಜ್ ಮೊದಲಾದ ಹಿಂದಿನ ಲೇಖಕರ ಮತ. ಎಜ್ರಾ ಪೌಂಡ್, ಕ್ಲಿಯಾಂತ್ ಬ್ರುಕ್ಸ್, ಸಿಡಿ ಲೀವಿಸ್, ಎಫ್, ಆರ್ ಲೀವಿಸ್, ಮೊದಲಾದ ಆಧುನಿಕ ವಿದ್ವಾಂಸರ ಮತ. ಕನ್ನಡದ ಹಿರಿಯ ಲೇಖಕರಾದ ಕುವೆಂಪು, ಗೋಕಾಕ್, ಅಡಿಗ, ಭೈರಪ್ಪ, ಮೊದಲಾದವರ ಹೇಳಿಕೆಗಳು. ಅವುಗಳ ಚರ್ಚೆ.

### ಅಧ್ಯಾಯ 2   ಪ್ರತಿಮಾ ಕಲ್ಪನೆಯ ಚಾರಿತ್ರಿಕ ಬೆಳವಣಿಗೆ

ಪ್ರವೇಶ. ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸಕರ ವಿಚಾರಗಳು. ಆಂಗ್ಲ ಮೆಟಫಿಸಿಕಲ್ ಕವಿಗಳಲ್ಲಿ ಪ್ರತಿಮೆಯ ಬಳಕೆ. ಜರ್ಮನ್ ವಿಮರ್ಶಕರ ಕೊಡುಗೆ. ಡಿಡರೊ, ಹರ್ಡರ್, ಗಯಟೆ, ಕ್ಯಾಂಟ್, ಷಿಲರ್, ಷೆಲಿಂಗ್, ಫ್ರೆಡರಿಕ್, ಶ್ಲೆಗೆಲ್, ವಿಲಹೆಲ್ಮ್ ಶ್ಲೆಗೆಲ್ — ಇವರಲ್ಲಿ ಪ್ರತೀಕ ಅಲೆಗರಿ ಮೊದಲಾದ ಪರಿಕಲ್ಪನೆಗಳ ಬಗ್ಗೆ ಚರ್ಚೆ. ಕೋಲರಿಜನಿಂದ ಅವುಗಳ ಪರಿಣಾಮಕಾರಿ ಪ್ರತಿಪಾದನೆ. ಆಂಗ್ಲ ರೊಮ್ಯಾಂಟಿಕ್ ಕವಿ ವಿಮರ್ಶಕರ ವಿಚಾರಗಳು. ಅವರ ವಿಚಾರದ ಮೂಲವನ್ನು ಕುರಿತ ಚರ್ಚೆ. ಸಿಂಬಲಿಸ್ಟ್ ಕಾವ್ಯ ಚಳುವಳಿಯಲ್ಲಿ ಪ್ರತೀಕ. ಪೋಪ್, ಬಾದಿಲೇರ್, ಮಲಾರ್ಮೆ ಮೊದಲಾದವರ ಅಭಿಪ್ರಾಯಗಳು. ಇಮೇಜಿಸ್ಟ್ ಪಂಥ ಮತ್ತು ಆಧುನಿಕ ಕಾವ್ಯ ಪಂಥಗಳಲ್ಲಿ ಪ್ರತಿಮಾದೃಷ್ಟಿ. ಪೌಂಡ್, ಎಲಿಯಟ್ ಮೊದಲಾದವರು ಪ್ರತಿಮೆಯ ಸ್ವರೂಪವನ್ನು ಕುರಿತು ಆಡಿರುವ ಮಾತುಗಳು.

ಅಧ್ಯಾಯ 3 ಪ್ರತಿಮೆಯ ವಿವಿಧ ಹಂತಗಳು

ಚಿಹ್ನೆ ಚಿತ್ರ ರೂಪಕ ಮತ್ತು ಪ್ರತೀಕ — ಇವುಗಳ ಪರಸ್ಪರ ಸಂಬಂಧ ಮತ್ತು ವ್ಯತ್ಯಾಸಗಳು. ಸರಳ ಚಿತ್ರದ ಸ್ವರೂಪ. ಆಧುನಿಕ ಕನ್ನಡ ಕಾವ್ಯದಲ್ಲಿ ಸರಳಚಿತ್ರ. ಸದೃಶಚಿತ್ರಗಳ ಸ್ವರೂಪ. ಉಪಮೆ : ಅಲಂಕಾರಿಕ ಮತ್ತು ಸೃಜನಾತ್ಮಕ. ಮಹೋಪಮೆ. ರೂಪಕ : ಮೃತರೂಪಕ ಮತ್ತು ಕಾವ್ಯರೂಪಕ ಕಾವ್ಯರೂಪಕ : ಅಲಂಕಾರಿಕ ಮತ್ತು ಸೃಜನಾತ್ಮಕ. ಆಧುನಿಕ ಕನ್ನಡ ಕಾವ್ಯದಲ್ಲಿ ಸದೃಶ ಚಿತ್ರಗಳ ಪರಿಶೀಲನೆ. ಸಾದೃಶ್ಯಮಾಲೆ. ಚಿತ್ರಚಿಂತನೆ. ಪ್ರತೀಕ ಚಿತ್ರ. ಚಿಹ್ನೆ ಸಂಕೇತ ಮತ್ತು ಪ್ರತೀಕಗಳ ನಡುವಿನ ಸಂಬಂಧ ವ್ಯತ್ಯಾಸಗಳು. ರೂಪಕ ಮತ್ತು ಪ್ರತೀಕ. ಪ್ರತೀಕ ಸೃಷ್ಟಿಯಾಗುವ ಬಗೆ. ಆರೋಹಕ ಪ್ರತೀಕ ಮತ್ತು ಅವರೋಹಕ ಪ್ರತೀಕ. ಟೀಕರೆ ಮತ್ತು ಕಾಹ್ಲರ್ ಇವರ ಅಭಿಪ್ರಾಯಗಳು. ಮೂಲ ರೂಪಾತ್ಮಕ ಪಂಥದ ವಿಮರ್ಶಕರ ಅಭಿಪ್ರಾಯಗಳು. ಜಾನ್ ಕಾಕ್ಟೋನ ವಿಚಾರಗಳು. ರಷ್ಯದ ರೂಪನಿಷ್ಠ ವಿಮರ್ಶಕರ ಮತ. ಅಖಂಡ ಪ್ರತೀಕ ಮತ್ತು ಸಂಯುಕ್ತ ಪ್ರತೀಕ. ಪ್ರತೀಕದ ಮೂರು ಮುಖ್ಯ ರೀತಿಗಳು : ಆರ್ಷೇಯ, ವೈಯಕ್ತಿಕ ಮತ್ತು ಸಾರ್ವತ್ರಿಕ. ವಿಭಾಗೀಕರಣ ಕುರಿತ ಚರ್ಚೆ. ನಿದರ್ಶನ.

ಅಧ್ಯಾಯ 4 ಪ್ರತಿಮೆಯ ಅಭಿವ್ಯಕ್ತಿಯನ್ನು ಕುರಿತ ಕೆಲವು ವಿಚಾರಗಳು

ವಿಭಿನ್ನ ಇಂದ್ರಿಯಾನುಭವಕ್ಕೆ ಸಂಬಂಧಿಸಿದ ಪ್ರತಿಮೆಗಳು. ದೃಶ್ಯ, ಶ್ರವಣ, ಸ್ಪರ್ಶ, ರಸ ಮತ್ತು ಘ್ರಾಣ ಪ್ರತಿಮೆಗಳು. ಆಧುನಿಕ ಕನ್ನಡ ಕಾವ್ಯದಿಂದ ನಿದರ್ಶನಗಳು. ಪ್ರತಿಮೆಗಳ ಅನ್ಯೋನ್ಯ ವರ್ತನೆ. 'ಅರ್ಥಮುಕ್ತ' ಪ್ರತಿಮೆಗಳು, ಪ್ರತಿಮೆಗಳ ಪರಸ್ಪರ ವರ್ತನೆಯಿಂದ ಸಂದರ್ಭ ಸೃಷ್ಟಿಯಾಗುವಿಕೆ.

## ಅಧ್ಯಾಯ 5 ಪ್ರತಿಮಾ ಸಾಮಗ್ರಿ

ಪ್ರತಿಮಾ ಸೃಷ್ಟಿಯಲ್ಲಿ ವಿವಿಧ ಜ್ಞಾನಕ್ಷೇತ್ರಗಳ ಸಾಮಗ್ರಿಯ ಬಳಕೆ. ಭಾರತೀಯ ಮತ್ತು ಪಾಶ್ಚಾತ್ಯ ಎರಡೂ ವಲಯಗಳಿಗೆ ಸಂಬಂಧಿಸುವ ಪುರಾಣ ಸಾಹಿತ್ಯ ಇತಿಹಾಸಗಳಿಂದ ಪ್ರತಿಮೆಗಳ ಸ್ವೀಕರಣ. ಜಾನಪದ ಮತ್ತು ನಾಗರಿಕ ಜೀವನ ಕ್ಷೇತ್ರಗಳ ಸಾಮಗ್ರಿಗಳಿಂದ ಕಟ್ಟಿದ ಪ್ರತಿಮೆಗಳು. ಮನೋವಿಜ್ಞಾನ ಮತ್ತು ಯಂತ್ರ ವಿಜ್ಞಾನಗಳ ಬೆಳವಣಿಗೆಯಿಂದ ಉಂಟಾದ ಪ್ರಭಾವ. ಸ್ವಪ್ನ ಮತ್ತು ಲೈಂಗಿಕ ಅನುಭವಗಳ ವಿಶೇಷ ಬಳಕೆ.

## ಅಧ್ಯಾಯ 6 ಪ್ರತಿಮಾ ಬಂಧವನ್ನು ಕುರಿತ ಕೆಲವು ವಿಚಾರಗಳು

ಪ್ರತಿಮೆಯ ಸ್ವರೂಪದಲ್ಲಿ ತೋರಬಹುದಾದ ಅವಯವ ಹೀನತೆ. ನಿಷ್ಪನ್ನ ಪ್ರತಿಮೆಗಳು. ವಾಚ್ಯವಾದ ಮುಕ್ತಾಯವಿರುವ ಪ್ರತಿಮೆಗಳು ತರ್ಕಬದ್ಧವಾದ ಪ್ರತಿಮೆಗಳ ಧ್ವನಿ ಹೀನತೆ — ಇತ್ಯಾದಿ ವಿಷಯಗಳ ಚರ್ಚೆ.

## ಅಧ್ಯಾಯ 7 ಉಪಸಂಹಾರ

ನವೋದಯ ಮತ್ತು ನವ್ಯ ಮಾರ್ಗಗಳಲ್ಲಿ ಬಳಕೆಯಾದ ಪ್ರತಿಮೆಗಳ ಸ್ವರೂಪದಲ್ಲಿ ಕಂಡುಬರುವ ವ್ಯತ್ಯಾಸ. ಭಾಷೆ, ಲಯ, ಭಾವದ ನಾಟಕೀಕರಣ, ಲೈಂಗಿಕ ಪ್ರತಿಮೆಗಳ ಬಳಕೆ — ಇತ್ಯಾದಿ ಅಂಶಗಳು.